[Govt. of Karnataka C.R.P. 67]

| Deposition Sheets (RP.No.57) Form No.4 (Civil) | **IN THE COURT OF CIVIL JUDGE & J.M.F.C., KARKALA.** |
|---|---|

**Criminal Case No. 607/2019**

**...................................................Vs....................................**

ಪಿ.ಡಬ್ಲ್ಯು : 4 ಸಿ.ಡಬ್ಲ್ಯು : 8

ಸಾಕ್ಷಿದಾರನ ಹೆಸರು : ಮಂಜುನಾಥ್

ತಂದೆಯ ಹೆಸರು : ವಿಷ್ಣು ಮೂರ್ತಿ ಅಡಿಗ

ಪ್ರಾಯ : 44 ವರ್ಷ

ಉದ್ಯೋಗ : ಮುಖ್ಯ ಪೇದೆ ಶಿರ್ವ ಪೊಲೀಸ್ ಠಾಣೆ

ವಾಸ : ಶಿರ್ವ

ದಿನಾಂಕ 03.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು 2015 ರಿಂದ 2022 ರವರೆಗೆ ಕಾರ್ಕಳ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 28.08.2018 ರಂದು ನಾನು ಠಾಣಾ ಪ್ರಭಾರ ಕರ್ತವ್ಯದಲ್ಲಿರುವಾಗ ಮೇಲಾಧಿಕಾರಿಯವರ ಆದೇಶದಂತೆ ಹಲ್ಲೆ ಪ್ರಕರಣದ ಗಾಯಳು ಚಾಸಾ-1 ರಘು ಪೂಜಾರಿಯವರ ಹೇಳಿಕೆ ಪಡೆಯಲು ಕಾರ್ಕಳ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ಪುರುಷರ ವಾರ್ಡ್ ನಲ್ಲಿ ಚಾಸಾ-1 ರವರನ್ನು ವಿಚಾರಿಸಿ 11.0 ರಿಂದ 11.45 ರವರೆಗೆ ಹೇಳಿಕೆ ಪಡೆದು ಠಾಣೆಗೆ 12.00 ಗಂಟೆಗೆ ಬಂದು ಠಾಣಾ ಅಕ್ರ ನಂ. 97/18 ಕಲಂ 325 ಐಪಿಸಿ ಪ್ರಕರಣ ದಾಖಲಿಸಿರುತ್ತೇನೆ. ಪ್ರ ವ ವರದಿಯ ಮೂಲ ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಪ್ರತಿಯನ್ನು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ.

ಪ್ರ ವ ವರದಿಯನ್ನು ಈಗ ನಾನು ನೋಡಿದ್ದು ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ಪ್ರ ವ ವರದಿಯನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ನಂತರ ತನಿಖಾ ಮುಂದುವರೆಸಿ ಈದು ಗ್ರಾಮದ ವರಿಮಾರು ಎಂಬಲ್ಲಿಗೆ ಹೋಗಿ ಅಲ್ಲಿ ಹಾಜರಿದ್ದ ಪ್ರತ್ಯಕ್ಷಿದಾರರಾದ ಚಾಸಾ-2 ರವರು ಸ್ಥಳವನ್ನು ತೋರಿಸಿಕೊಟ್ಟಂತೆ ಚಾಸಾ-4 ಮತ್ತು 5 ರವರ ಸಮಕ್ಷಮ ಸ್ಥಳ ಮಹಜರನ್ನು ನಿಪಿ-2 ಪ್ರಕಾರ ಮಾಡಿ ನಿಪಿ-3 ರ ಪ್ರಕಾರ ನಕ್ಷೆಯನ್ನು ಮಾಡಿ ನಿಪಿ-4 ಭಾವಚಿತ್ರ ತೆಗೆದಿರುತ್ತೇನೆ. ನಿಪಿ-2 ರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಿಪಿ-3 ನಕ್ಷೆಯಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನ. ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.

ನಂತರ ಆರೋಪಿಯನ್ನು ಆತನ ಮನೆಯಿಂದ ರಾತ್ರಿ 8.30 ಕ್ಕೆ ವಶಕ್ಕೆ ಪಡೆದುಕೊಂಡಿರುತ್ತೇನೆ. ನಂತರ 9.30 ಗಂಟೆಗೆ ಠಾಣೆಗೆ ಕರೆದುಕೊಂಡು ಬಂದು ರಾತ್ರಿ 10.00 ಗಂಟೆಯವರೆಗೆ ದಸ್ತಗಿರಿ ನಿಯಮ ಪಾಲಿಸಿ ಆರೋಪಿಯನ್ನು ದಸ್ತಗಿರಿ ಮಾಡಿದ ಬಗ್ಗೆ ಆತನ ತಂದೆ ಫಕೀರಪ್ಪ ರವರಿಗೆ ಮಾಹಿತಿಯನ್ನು ನೀಡಿರುತ್ತೇನೆ.

ಆರೋಪಿಯ ದಸ್ತಗಿರಿ ಮಹಜರಿನಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ಆರೋಪಿಯ ದಸ್ತಗಿರಿ ಮಹಜರನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರಾದ ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿಃ 01.09.2018 ರಂದು ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ವೈದ್ಯಧಿಕಾರಿಯವರಿಂದ ಚಾಸಾ-1 ಮತ್ತು 3 ರವರ ಗಾಯದ ದೃಢಪತ್ರವನ್ನು ಪಡೆದುಕೊಂಡಿರುತ್ತೇನೆ. ಸದ್ರಿ ಚಾಸಾ-1 ರವರ ಗಾಯದ ದೃಢತಪ್ರದಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಚಾಸಾ-1 ರವರ ಗಾಯದ ದೃಢಪತ್ರವನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಸದ್ರಿ ಚಾಸಾ-3 ರವರ ಗಾಯದ ದೃಢತಪ್ರದಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಚಾಸಾ-3 ರವರ ಗಾಯದ ದೃಢಪತ್ರವನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ಚಾಸಾ-1 ರವರ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದರಲ್ಲಿ ನನ್ನ ಸಹಿ ಇರುತ್ತದೆ. ಸದ್ರಿ ಹೇಳಿಕೆಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-9 ರವರಿಗೆ ನೀಡಿರುತ್ತೇನೆ.

ಆರೋಪಿಯನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀಮತಿ ಕೆ ಎಸ್ ವಕೀಲರಿಂದಃ</u>

ಆರೋಪಿ ಚಾಸಾ-1 ರವರ ವಿರುದ್ಧ ನೀಡಿದ ದೂರಿನ ಬಗ್ಗೆ ತಿಳಿದುಕೊಂಡಿರುವುದಿಲ್ಲ. ಆರೋಪಿ ದೂರು ಕೊಟ್ಟಂತೆ ಅಕ್ರ ನಂ. 96/2018 ರಂತೆ ಪ್ರಕರಣ ದಾಖಲಾದ ಬಗ್ಗೆ ನಾನು ಮಾಹಿತಿ ತಿಳಿದುಕೊಂಡಿರುವುದಿಲ್ಲ. ಈ ಪ್ರಕರಣ ಆಗಿದೆ ಎಂದು ಹೇಳುವ ಸಮಯದಲ್ಲಿ ಈ ಪ್ರಕರಣದ ಪಿರ್ಯಾದಿದಾರರ ಮತ್ತು ಇತರರ ವಿರುದ್ಧ ಎಸ್ ಸಿ 85/2018 ರಂತೆ ದೋಷಾರೋಪಣಪಟ್ಟಿ ಸಲ್ಲಿಸಿ ಸದ್ರಿ ಪ್ರಕರಣ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಉಡುಪಿ ಇಲ್ಲಿ ದಾಖಲಾದ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಪ್ರಕರಣ ಆರೋಪಿಯ ವಿರುದ್ಧ ಪ್ರತಿದೂರು ಆಗಬೇಕಾಗಿ ಪಿರ್ಯಾದುದಾರರಿಂದ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮನ್ಸರೂ ಸಾಹೇಬ್ , ಕರಿಯ ಶೆಟ್ಟಿ , ಅಮೀನಾ ಹಾಗೂ ಧರ್ಣಪ್ಪ ಎಂಬುವವರನ್ನು ಮಹಜರು ಮಾಡಿದ್ದೇನೆ ಎಂದು ಹೇಳುವ ಸಮಯದಲ್ಲಿ ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುವುದಿಲ್ಲ.

ಚಾಸಾ-4 ಮತ್ತು 5 ರವರಿಗೆ ನಾನು ನೋಟಿಸು ನೀಡಿರುವುದಿಲ್ಲ ಮತ್ತು ಯಾರು ಅವರಿಗೆ ನೋಟಿಸು ನೀಡಿದ್ದಾರೆ ಎಂಬ ಮಾಹಿತಿ ಇಲ್ಲ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2, 3 , 6 ನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಂಚರ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಮರುಹೇಳಿಕೆಯನ್ನು ಅವರು ಕೊಟ್ಟಿರುವುದಿಲ್ಲ ಮತ್ತು ನಾನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-7 ಮತ್ತು 8 ನ್ನು ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಹೇಳಿಕೆಯ ಸತ್ಯಾಂಶವನ್ನು ತಿಳಿದುಕೊಳ್ಳದೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ